ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು .

**S.C. No. 264/2019**

ದಿನಾಂಕ : .

ಕರ್ನಾಟಕ ಸರ್ಕಾರದ ಪರವಾಗಿ
ಸೋಲದೇವನಹಳ್ಳಿ ಪೊಲೀಸ್ ಠಾಣೆ.

: ಪಿರ್ಯಾದುದಾರರು.

ವಿರುದ್ಧ

ಶ್ರೀ. ವಿನೋದ್ ಬಿನ್ ಲೇಟ್
ವೆಂಕಟಸ್ವಾಮಿ, 28 ವರ್ಷ, ವಾಸ : ನಂ.
136, ರಾಮಯ್ಯ ಕಾಲೋನಿ, ಬಂಡಪ್ಪ
ಗಾರ್ಡನ್, ಮುತ್ಯಲಮ್ಮನಗರ,
ಯಶವಂತಪುರ, ಬೆಂಗಳೂರು.

: ಆರೋಪಿ.

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರ ಅನ್ವಯ ಆರೋಪಿಯ ಹೇಳಿಕೆ : -

ಪ್ರಶ್ನೆ : **1-** ಈ ಪ್ರಕರಣದಲ್ಲಿ ಸಾಕ್ಷಿ ನುಡಿದಿರುವ ಎಲ್ಲಾ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿ ಅರ್ಥೈಸಿಕೊಂಡಿರುತ್ತೀರೋ?

ಉತ್ತರಃ -

ಪ್ರಶ್ನೆ : **2** ಫ್ರಾಸಾ-1/ ಪ್ರಕಾಶ್ ರವರು ಸಾಕ್ಷಿ ನುಡಿಯುತ್ತಾ ದಿನಾಂಕ 24.12.2018 ರಂದು ಮಧ್ಯಾಹ್ನ 2.30 ರಿಂದ 3.00 ಗಂಟೆ ಸಮಯದಲ್ಲಿ ಅವರು ಮನೆಯಲ್ಲಿ ಊಟ ಮಾಡಿ ಕುಳಿತುಕೊಂಡಿದ್ದಾಗ ಕಾಪಾಡಿ ಕಾಪಾಡಿ ಎಂದು ಕಿರುಚಿಕೊಳ್ಳುತ್ತಿದ್ದು, ಅವರು ಕೂಡಲೇ ಹೊರಗಡೆ ಬಂದಾಗ ಚಾಸಾ. 2 ರವರ ಕತ್ತನ್ನು ಕೊಯ್ದಿದ್ದರು ಮತ್ತು ರಕ್ತ ಬಂದು ಅವರ ಬಟ್ಟೆಯೆಲ್ಲಾ ರಕ್ತ ಆಗಿದ್ದು ಪ್ರಜ್ಞೆ ತಪ್ಪಿ ಬಿದ್ದಿದ್ದರು ಹಾಗೂ ಅವರು ಕೂಡಲೇ ಅವರ ಕಾರಿನಲ್ಲಿ ಚಾಸಾ. 2 ರವರನ್ನು SK ಹೆಲ್ತ್ ಕೇರ್ ಆಸ್ಪತ್ರೆಗೆ ಸಾಗಿಸಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u>

ಪ್ರಶ್ನೆ **: 3** ಫ್ರಾಸಾ-1/ ಪ್ರಕಾಶ್ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ಸದರಿ ವಿಷಯವನ್ನು ಅವರು ಆಕೆಯ ಮಗಳಿಗೆ ಮತ್ತು ತಂದೆಗೆ ಫೋನ್ ಮೂಲಕ ತಿಳಿಸಿದ್ದು, ಪೋಲೀಸರು ಸಂಜೆ ಸುಮಾರು 5.45 ರಿಂದ 6.00 ಗಂಟೆಗೆ ಅವರ ಮನೆಯ ಬಳಿ ಬಂದು ಅವರ ದೂರನ್ನು ಪಡೆದುಕೊಂಡು ಸ್ಥಳದಲ್ಲಿ ಮಹಜರ್ ಮಾಡಿದ್ದು, ಚಾಸಾ. 2 ರವರ ಮನೆಯ ಬಾಗಿಲಿಗೆ, ಮನೆ ಹಾಲ್‌ನಲ್ಲಿ ರಕ್ತದ ಕಲೆಯಾಗಿದ್ದು ಅದನ್ನು ಹತ್ತಿಯಿಂದ ಸಂಗ್ರಹಿಸಿ ಸ್ಥಳದಲ್ಲಿ ಬಿದ್ದಿದ್ದ ಸಿಗರೇಟ್ ಪೀಸ್‌ಗಳನ್ನು ಜಪ್ತಿ ಮಾಡಿದ್ದು ಹಾಗೂ ಮಾದರಿ ಹತ್ತಿಯನ್ನು ಸಹ ಜಪ್ತಿ ಮಾಡಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u>

ಪ್ರಶ್ನೆ **: 4** ಫ್ರಾಸಾ-1/ ಪ್ರಕಾಶ್ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ಅವರು, ಶೇಖರ್ ಹಾಗೂ ಶೇಖರ್ ರವರ ಹೆಂಡತಿ ಪುಂಗಮ್ಮ, ಚಾಸಾ. 2 ರವರನ್ನು ಆಸ್ಪತ್ರೆಗೆ ಸಾಗಿಸಿದ್ದರು ಹಾಗೂ ಮಹಜರ್ ಸಮಯದಲ್ಲಿ ಅವರು, ಹರೀಶ್ ಬಾಬು ಮತ್ತು ಚಂದ್ರಕಾಂತ್ ಎನ್ನುವವರು ಇದ್ದರು ಹಾಗೂ ಆಸ್ಪತ್ರೆಯಲ್ಲಿ ಅವರು ಗಾಯಾಳುವನ್ನು ವಿಚಾರಣೆ ಮಾಡಿದಾಗ ಗಾಯಾಳು ಅವರು ಅಂಗಡಿಯಲ್ಲಿ ಟೀ ಮಾರುತ್ತಿದ್ದಾಗ ಒಬ್ಬ ವ್ಯಕ್ತಿ ಬಂದು ಟೀ ಪಡೆದುಕೊಂಡು ಟೀ ಕುಡಿದ ನಂತರ ಆತನಿಗೆ ಸೀಗರೇಟ್ ಕೊಟ್ಟು ಅಡುಗೆ ಮಾಡುವ ಕೆಲಸಕ್ಕೆ ಚಾಸಾ. 2 ಮನೆಯ ಒಳಭಾಗಕ್ಕೆ ಹೋದಾಗ ಸದರಿ ವ್ಯಕ್ತಿ ಯಾರೂ ಇಲ್ಲದ್ದನ್ನು ನೋಡಿಕೊಂಡು ಮನೆಯ ಒಳಗಡೆ ಬಂದು ಆಕೆ ಅಡುಗೆ ಮನೆಯಲ್ಲಿದ್ದಾಗ ಹಿಂದಿನಿಂದ ಆಕೆಯ ಬಾಯಿಯನ್ನು ಕೈಯಿಂದ ಮುಚ್ಚಿ ಆಕೆಯ ಕತ್ತಿನಲ್ಲಿದ್ದ ಮಾಂಗಲ್ಯ ಸರವನ್ನು ಹಿಡಿದುಕೊಂಡು ಜೋರಾಗಿ ಎಳೆದ ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u>

ಪ್ರಶ್ನೆ **: 5** ಫ್ರಾಸಾ-1/ ಪ್ರಕಾಶ್ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ಚಾಸಾ. 2 ರವರು ಚೈನ್ ಎಳೆಯುವುದನ್ನು ತಡೆದಾಗ ಸದರಿ ವ್ಯಕ್ತಿ ಚಾಕುವಿನಿಂದ ಆಕೆಯ ಕತ್ತನ್ನು ಕೊಯ್ದು ಆಕೆಯ ಚೈನನ್ನು ಕಿತ್ತುಕೊಂಡಿದ್ದು ಆತನ ಕೈಗೆ ಸ್ವಲ್ಪ ಭಾಗ ಮಾತ್ರ ಹೋಗಿದ್ದು ಉಳಿದ ಭಾಗ ಆಕೆಯ ಮೈ ಮೇಲೆ ಇದ್ದು ಹಾಗೂ ಸದರಿ ವ್ಯಕ್ತಿ ಓಡಿ ಹೋಗಿದ್ದ ಹಾಗೂ ಮಾರನೇ ದಿನ ಪೋಲೀಸರು ಅವರನ್ನು ಠಾಣೆಗೆ ಕರೆಸಿ ಆರೋಪಿಯಾದ ನಿನ್ನನ್ನು ತೋರಿಸಿದ್ದು ಹಾಗೂ ನಿನ್ನ ಹೆಸರು ವಿನೋದ್ ಎಂದು ಅವನಿಗೆ ತಿಳಿಸಿದ್ದು ಹಾಗೂ ಪೊಲೀಸರು ನಿನ್ನ ಕಡೆಯಿಂದ ಒಂದು ರೇಸರ್ ಹಾಗೂ ಚೈನಿನ ಪೀಸನ್ನು ಜಪ್ತಿ ಮಾಡಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u>

ಪ್ರಶ್ನೆ **: 6** ಫ್ರಾಸಾ-3/ ಹರೀಶ್ ಬಾಬು ರವರು ಸಾಕ್ಷಿ ನುಡಿಯುತ್ತಾ ದಿನಾಂಕ 24-12-2018 ರಂದು ಮಾದನಾಯಕನಹಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಅವರು ವನಜಾಕ್ಷಮ್ಮ ಅವರ ಮನೆಯ ಸಮೀಪಕ್ಕೆ ಭೇಟಿ ನೀಡಿದ್ದು, ಅಲ್ಲಿ ಚಾಸಾ. 2 ರವರ ಚೈನ್ ಕಳ್ಳತನವಾಗಿದ್ದು ಮತ್ತು ಅವರಿಗೆ ಕುತ್ತಿಗೆಯಲ್ಲಿ ಗಾಯವೂ ಆಗಿದ್ದು ಆ ಸಮಯದಲ್ಲಿ ಅವರು, ಪ್ರಕಾಶ್ ಮತ್ತು ಚಂದ್ರಕಾಂತ್ ಅಲ್ಲಿದ್ದು ಪೊಲೀಸರು ಅಡಿಗೆಮನೆಯಿಂದ ಹತ್ತಿ ಸ್ವಾಬ್‌ನಲ್ಲಿ ರಕ್ತದ ಮಾದರಿಯನ್ನು ಸಂಗ್ರಹಿಸಿದ್ದು ಮತ್ತು ಅರ್ಧ ಸುಟ್ಟ ರಕ್ತದ ಕಲೆ ಇರುವ ಕಿಂಗ್ ಸಿಗರೇಟನ್ನು ಕೂಡಾ ಒಂದು ಕವರ್‌ನಲ್ಲಿ ಸಂಗ್ರಹಿಸಿದ್ದು ಹಾಗೂ ಮಹಜರ್ ಅನ್ನು ಸಂಜೆ 05:30 ರಿಂದ 06:30 ರ ನಡುವೆ ತಯಾರಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u>

ಪ್ರಶ್ನೆ**: 7** ಫ್ರಾಸಾ-4/ ಚಂದ್ರಕಾಂತ್ ರವರು ಸಾಕ್ಷಿ ನುಡಿಯುತ್ತಾ ಮಹಜರ್ ಅನ್ನು ಸುಮಾರು 3 - 4 ವರ್ಷಗಳ ಹಿಂದೆ ಚಾಸಾ.2 ರವರ ಮನೆಯಲ್ಲಿ ಮಾಡಿದ್ದು ಹಾಗೂ ಚಾಸಾ. 2 ರವರ ಸರ ಕಿತ್ತುಕೊಂಡು ಹೋದ ಬಗ್ಗೆ ಮಹಜರ್ ಮಾಡಲು ಪೊಲೀಸರು ಬಂದಿದ್ದು ಆ ಸಮಯದಲ್ಲಿ ಚಾಸಾ.1 ಪ್ರಕಾಶ್ ಇವರು ಪೊಲೀಸರಿಗೆ ಮಾಹಿತಿ ನಿಡುತ್ತಿದ್ದು, ಅವರ ಜೊತೆ ಚಾಸಾ.3 ರವರು ಸ್ಥಳದಲ್ಲಿ ಇದ್ದು ಹಾಗೂ ಸದರಿ ಸ್ಥಳದಲ್ಲಿ ರಕ್ತದ ಕಲೆ ಇದ್ದ ಒಂದು ಸಿಗರೇಟ್ ತುಂಡು ಹಾಗೂ ರಕ್ತದ ಕಲೆ ಬಿದ್ದಿದ್ದು, ರಕ್ತದ ಕಲೆಯನ್ನು ಪೋಲೀಸರು ಹತ್ತಿಯಲ್ಲಿ ತೆಗೆದುಕೊಂಡಿದ್ದು ಹಾಗೂ ಅವುಗಳನ್ನು ಒಂದು ಪ್ಲಾಸ್ಟಿಕ್ ರೀತಿಯಲ್ಲಿದ್ದ ಕಂಟೈನರ್ ಗೆ ಹಾಕಿದ್ದು ಹಾಗೂ ಮಹಜರ್ ಅನ್ನು ಸಂಜೆ 05.30 ರಿಂದ 06.30 ರ ಸಮಯದಲ್ಲಿ ಮಾಡಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u>

ಪ್ರಶ್ನೆ**: 8** ಫ್ರಾಸಾ-5/ ಶೇಖರ್ ರವರು ಸಾಕ್ಷಿ ನುಡಿಯುತ್ತಾ ಚಾಸಾ.2 ರವರ ಮನೆ ಅವರ ಮನೆಯಿಂದ 50 ಅಡಿ ದೂರದಲ್ಲಿ ಇದ್ದು ಹಾಗೂ ಸುಮಾರು 4 ವರ್ಷದ ಹಿಂದೆ ಮಧ್ಯಾಹ್ನ 03.00 ಗಂಟೆ ಸಮಯದಲ್ಲಿ ಚಾಸಾ.2 ರವರ ಮನೆಯ ಬಳಿ ಜನರು ಸೇರಿಕೊಂಡಿದ್ದು, ಮೊದಲಿಗೆ ಚಾಸಾ.1 ಹಾಗೂ 7 ರವರು ಸದರಿ ಸ್ಥಳಕ್ಕೆ ಹೋಗಿದ್ದು, ನಂತರ ಅವರು ಹಾಗೂ ಚಾಸಾ.6 ರವರು ಸದರಿ ಸ್ಥಳಕ್ಕೆ ಹೋಗಿದ್ದು, ಸ್ಥಳದಲ್ಲಿ ನೋಡಿದಾಗ ಚಾಸಾ.2 ರವರು ಅವರ ಮನೆಯ ಗೇಟಿನ ಬಳಿ ಕುಳಿತಿದ್ದು, ಅವರ ಕುತ್ತಿಗೆಯ ಬಳಿ ರಕ್ತಸ್ರಾವ ಆಗುತ್ತಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u>

ಪ್ರಶ್ನೆ **: 9** ಪ್ರಾಸಾ-5/ ಶೇಖರ್ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ಚಾಸಾ.2 ರವರನ್ನು ಚಾಸಾ.1 ರವರು, ಅವರ ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅವರ ಜೊತೆ ಅವರು ಚಾಸಾ.6 ಮತ್ತು 7 ರವರು ಹೋಗಿದ್ದು ಆ ದಿನ ಚಾಸಾ.2 ರವರನ್ನು S.K.Health Care Hospital ಗೆ ಕರೆದುಕೊಂಡು ಹೋಗಿ ದಾಖಲಿಸಿ ಅವರು ವಾಪಸ್ ಬಂದಿದ್ದು ಹಾಗೂ ಚಾಸಾ.2 ರವರ ಕುತ್ತಿಗೆಯಿಂದ ಚೈನ್ ಕಿತ್ತುಕೊಳ್ಳುವಾಗ ಒಂದು ಚಾಕುವಿನಿಂದ ಅವರ ಕುತ್ತಿಗೆಗೆ ಕೂಯ್ದು ಕಾರಣ ಅವರಿಗೆ ಗಾಯ ಆಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u>

ಪ್ರಶ್ನೆ **: 10** ಪ್ರಾಸಾ-6/ ಮುನಿಯಪ್ಪ ರವರು ಸಾಕ್ಷಿ ನುಡಿಯುತ್ತಾ ದಿನಾಂಕ 25.12.2018 ರಂದು ಸೋಲದೇವನಹಳ್ಳಿ ಪೊಲೀಸರು ಅವರನ್ನು ಠಾಣೆಗೆ ಕರೆಸಿದ್ದು, ಆ ಸಮಯದಲ್ಲಿ ಆರೋಪಿಯಾದ ನೀನು ಠಾಣೆಯಲ್ಲಿ ಇದ್ದು, ಆರೋಪಿಯಾದ ನೀನು ಚಾಸಾ.2 / ವನಜಾಕ್ಷಮ್ಮ ಇವರ ಕತ್ತನ್ನು ಕೂಯ್ದು ಮಾಂಗಲ್ಯಸರವನ್ನು ಕಿತ್ತುಕೊಂಡು ಹೋಗಿದ್ದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u>

ಪ್ರಶ್ನೆ **: 11** ಪ್ರಾಸಾ-6/ ಮುನಿಯಪ್ಪ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ಆರೋಪಿಯಾದ ನೀನು ಒಂದು ಡಿಯೋ ಸ್ಕೂಟರ್ ನಲ್ಲಿ ಇಟ್ಟಿದ್ದ ನಿನಗೆ ಸೇರಿದ ಒಂದು ಟೀ ಶರ್ಟು ಹಾಗೂ ಪ್ಯಾಂಟನ್ನು ಅವರ ಮುಂದೆ ಹಾಜರುಪಡಿಸಿದ್ದು, ಸದರಿ ದ್ವಿಚಕ್ರ ವಾಹನವನ್ನು ಆರೋಪಿಯಾದ ನೀನು ಠಾಣೆಯ ಮುಂದೆ ನಿಲ್ಲಿಸಿದ್ದು ಅದನ್ನು ಪೊಲೀಸರಿಗೆ ತೋರಿಸಿದ್ದು ನಂತರ ಆರೋಪಿಯಾದ ನೀನು ಅವರಿಗೆ ಸದರಿ ಬಟ್ಟೆಗಳನ್ನು ತೋರಿಸಿದ್ದು

ಅದು ರಕ್ತದ ಕಲೆಯಾಗಿದ್ದು ನಂತರ ಅವರೆಲ್ಲರು ಒಳಗೆ ಹೋಗಿದ್ದು ಹಾಗೂ ಸದರಿ ಮಹಜರ್ ಅನ್ನು ಪೊಲೀಸರು ಪೊಲೀಸ್ ಠಾಣೆಯ ಆವರಣದಲ್ಲಿ ರಾತ್ರಿ 7.00 ರಿಂದ 8.00 ಗಂಟೆಯ ಸಮಯದಲ್ಲಿ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

ಉತ್ತರಃ -

ಪ್ರಶ್ನೆ: **12** ಫ್ರಾಸಾ-7 / ಧ್ರುವಕುಮಾರ್ ರವರು ಸಾಕ್ಷಿ ನುಡಿಯುತ್ತಾ 2018 ನೇ ಇಸವಿ 26 ನೇ ತಾರೀಖಿನಂದು 1 ನೇ ತಿಂಗಳು ಅಥವಾ ಬೇರೆ ತಿಂಗಳಿನಲ್ಲಿ ಅವರು ವಿನಾಯಕ ಲೇಔಟ್, ಶೆಟ್ಟಿಹಳ್ಳಿ ರಸ್ತೆಯಲ್ಲಿ ಇರುವ ಆಸ್ಪತ್ರೆಗೆ ಹೋಗಿದ್ದು ಆಗ ಒಬ್ಬ ಪೊಲೀಸ್ ಪೇದೆ ಅವರಿಗೆ ಠಾಣೆಗೆ ಬರುವಂತೆ ತಿಳಿಸಿದ್ದು ಅದಕ್ಕಾಗಿ ಅವರು ಹಾಗೂ ಚಾಸಾ.12 ರವರು ಠಾಣೆಗೆ ಹೋಗಿದ್ದು, ಠಾಣೆಯಲ್ಲಿ ಇದ್ದ ಆರೋಪಿಯಾದ ನಿನ್ನನ್ನು ತೋರಿಸಿ ಆತ ಒಂದು ಸರ ಕಿತ್ತುಕೊಳ್ಳಲು ಹೋದಾಗ ಮಹಿಳೆಯ ಕತ್ತಿಗೆ ಪೆಟ್ಟಾಗಿದ್ದು ಅದಕ್ಕಾಗಿ ಮಹಜರ್ ಗೆ ಸಹಕರಿಸುವಂತೆ ತಿಳಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

ಉತ್ತರಃ -

ಪ್ರಶ್ನೆ : **13** ಫ್ರಾಸಾ-7/ ಧ್ರುವಕುಮಾರ್ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ನಂತರ ಪೊಲೀಸರು ನೋಟಿಸ್ ನೀಡಿದ್ದು ಅದಾದ ಮೇಲೆ ಅವರನ್ನು ಮಹಜರ್ ಗೆ ಕರೆದುಕೊಂಡು ಹೋಗಿದ್ದು ಆ ಮಹಿಳೆಯ ಮನೆ ಶೆಟ್ಟಿಹಳ್ಳಿ ರಸ್ತೆ ವಿನಾಯಕ ನಗರದಲ್ಲಿ ಇದ್ದು ಅಲ್ಲಿಗೆ ಅವರನ್ನು ಕರೆದುಕೊಂಡು ಹೋಗಿ ಸದರಿ ಸ್ಥಳವನ್ನು ಅವರಿಗೆ ತೋರಿಸಿ ಆ ಮಹಿಳೆಯ ಮಾಂಗಲ್ಯ ಸರ

ಅರ್ಧವನ್ನು ಆರೋಪಿಯಾದ ನೀನು ಕಿತ್ತುಕೊಂಡು ಹೋಗಿದ್ದು ಉಳಿದ ಅರ್ಧ ಮಹಿಳೆಯ ಕೈನಲ್ಲಿ ಇರುವುದಾಗಿ ಹೇಳಿ ಮಹಜರ್ ಜರುಗಿಸಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

ಉತ್ತರಃ -

ಪ್ರಶ್ನೆ : **14** ಫ್ರಾಸಾ-7/ ದ್ರುವಕುಮಾರ್ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ನಂತರ ಆರೋಪಿಯಾದ ನೀನು ಚಾಕು ಹಾಕಿದ ಸ್ಥಳವನ್ನು ತೋರಿಸುವುದಾಗಿ ಹೇಳಿ ಅವರನ್ನು ಸ್ವಲ್ಪ ಮುಂದಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಗಾಡಿ ನಿಲ್ಲಿಸಿ ಒಂದು ಜಾಗದಲ್ಲಿ ಬಿದಿರು ಮೇಳದಲ್ಲಿ ಒಂದು ರೇಸರ್ ಇದ್ದು ಅದನ್ನು ಆರೋಪಿಯಾದ ನೀನು ತೋರಿಸಿದ್ದು, ಪೊಲೀಸರು ಮಹಜರ್ ಮಾಡಿ ಅವರ ಸಹಿ ಪಡೆದಿದ್ದು ಮೊದಲು ಕರೆದುಕೊಂಡು ಹೋಗಿದ್ದ ಸ್ಥಳ ಪೆಟ್ಟಾಗಿದ್ದ ಮಹಿಳೆಯ ಮನೆ ಆಗಿದ್ದು ಹಾಗೂ ಅವರು ಆ ದಿನ ಬೆಳಿಗ್ಗೆ 7.00 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿದ್ದು ಎಲ್ಲಾ ಕ್ರಮ ಮುಗಿಸುವಷ್ಟರಲ್ಲಿ ಬೆಳಿಗ್ಗೆ 10.00 ರಿಂದ 10.30 ಸಮಯ ಆಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

ಉತ್ತರಃ -

ಪ್ರಶ್ನೆ : **15** ಫ್ರಾಸಾ-9/ ಶಿವರಾಜು ರವರು ಸಾಕ್ಷಿ ನುಡಿಯುತ್ತಾ 2018 ನೇ ಸಾಲಿನಲ್ಲಿ ಪೊಲೀಸರು ಅವರನ್ನು ಠಾಣೆಗೆ ಕರೆಸಿದ್ದು, ಠಾಣೆಯಲ್ಲಿ ಚಾಸಾ.24 ರವರು ಹಾಜರಿದ್ದು, ಠಾಣೆಯಲ್ಲಿ ಇದ್ದ ಆರೋಪಿಯಾದ ನಿನ್ನನ್ನು ತೋರಿಸಿ ಆರೋಪಿಯಾದ ನೀನು ಈ ರೀತಿ ಕೃತ್ಯ ಮಾಡಿದ್ದು ಪಂಚನಾಮೆ

ಮಾಡಬೇಕಾಗಿದ್ದು ಸಹಕರಿಸುವಂತೆ ಅವರಿಗೆ ತಿಳಿಸಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

ಉತ್ತರಃ -

ಪ್ರಶ್ನೆ **: 16** ಫ್ರಾಸಾ-9/ ಶಿವರಾಜು ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ಆರೋಪಿಯಾದ ನೀನು ಆ ಸಮಯದಲ್ಲಿ ಪೊಲೀಸರ ಮುಂದೆ ಒಂದು ಚಿನ್ನದ ಮಾಂಗಲ್ಯ ಸರದ ಪೀಸ್ ಅನ್ನು ಪೇಪರ್ ನಲ್ಲಿ ಸುತ್ತಿ ತನ್ನ ಮನೆಯಲ್ಲಿ ಇಟ್ಟಿದ್ದು ಅದನ್ನು ತೋರಿಸುವುದಾಗಿ ಪೊಲೀಸರ ಮುಂದೆ ಹೇಳಿದ್ದು, ಅದರಂತೆ ಆರೋಪಿಯಾದ ನೀನು ಯಶವಂತಪುರದ ಮುತ್ಯಾಲ ನಗರದಲ್ಲಿ ಇರುವ ನಿನ್ನ ಮನಗೆ ಅವರನ್ನು ಕರೆದುಕೊಂಡು ಹೋಗಿದ್ದು, ಆರೋಪಿಯಾದ ನೀನು ನಿನ್ನ ಮನೆಯ ಒಳಗೆ ಹೋಗಿ ಅಲ್ಮೆರಾದ ಮೇಲೆ ಇಟ್ಟಿದ್ದ ಪೇಪರ್ ನಲ್ಲಿ ಸುತ್ತಿದ್ದ ಚೈನ್ ಅನ್ನು ತೆಗೆದು ತೋರಿಸಿದ್ದು ಹಾಗೂ ಆರೋಪಿಯಾದ ನೀನು ಚಿನ್ನದ ಚೈನ್ ತೋರಿಸಿದ ನಂತರ ಪೊಲೀಸರು ಅವರಿಗೆ ವಿವರಣೆ ನೀಡಿ ಬರವಣಿಗೆ ಮಾಡಿ ಅವರ ಸಹಿಯನ್ನು ಪಡೆದಿದ್ದು ಹಾಗೂ ಅವರು ಮಹಜರ್ ಗೆ ಸಹಕರಿಸಿದ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

ಉತ್ತರಃ -

ಪ್ರಶ್ನೆ **: 17** ಫ್ರಾಸಾ-10/ ಡಾ. ಪ್ರವೀಣ್ ಎಸ್. ರವರು ಸಾಕ್ಷಿ ನುಡಿಯುತ್ತಾ ದಿನಾಂಕ 24.12.2018 ರಂದು ಚಾಸಾ.2 ರವರು ಹಲ್ಲೆಯ

ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಬಂದಿದ್ದು ಅವರನ್ನು ಅವರನ್ನು ಪರೀಕ್ಷಿಸಿ ನೋಡಲಾಗಿ ಗಾಯ ಸಂಖ್ಯೆ **1)** ಕುತ್ತಿಗೆಯ ಮಧ್ಯ ಭಾಗದಲ್ಲಿ 15 x 1.7 cm x ಮಾಂಸದ ಆಳ ಹರಿದ ಗಾಯದ ತುದಿ ಭಾಗ ಹರಿತವಾಗಿ ಹರಿದಿದ್ದು ಮತ್ತು ಅದು ರಕ್ತಸ್ರಾವದಿಂದ ಕೂಡಿತ್ತು ಹಾಗೂ **2)** ಹಲವಾರು ಗಾಯಗಳು ಕೈ ಮತ್ತು ಮೊಣಕೈಯಲ್ಲಿ ಹರಿದ ಗಾಯ ಇತ್ತು ಹಾಗೂ ಸದರಿ ಗಾಯಾಗಳ ಪೈಕಿ 1 ನೇ ಗಾಯ ತೀವ್ರ ಸ್ವರೂಪದ ಗಾಯ ಆಗಿದ್ದು, 2 ನೇ ಗಾಯ ಸಾಧಾರಣ ಸ್ವರೂಪದ ಗಾಯ ಆಗಿದ್ದು ಈ ಕುರಿತು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

ಉತ್ತರಃ -

ಪ್ರಶ್ನೆ **: 18** ಪ್ರಾಸಾ-11/ ವೆಂಕಟೇಗೌಡ ರವರು ಸಾಕ್ಷಿ ನುಡಿಯುತ್ತಾ ದಿನಾಂಕ 24.12.2018 ರಂದು ಸಂಜೆ 5.00 ಗಂಟೆಗೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಸ್ಥಳದಲ್ಲಿ ಹಾಜರಿದ್ದ ಪಿರ್ಯಾದಿಯ ಹೇಳಿಕೆ ದೂರನ್ನು ಪಡೆದು ಅವರ ಠಾಣಾ ಮೊಕದ್ದಮೆ ಸಂಖ್ಯೆ 381/2018 ರಂತೆ ಪ್ರಕರಣ ದಾಖಲಿಸಿ ಪ್ರ.ವ.ವ ಅನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

ಉತ್ತರಃ -

ಪ್ರಶ್ನೆ **: 19** ಪ್ರಾಸಾ-11/ ವೆಂಕಟೇಗೌಡ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ನಂತರ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ ಚಾಸಾ.7 ಮತ್ತು 8 ರವರ ಸಮಕ್ಷಮ ಸಂಜೆ 5.30 ರಿಂದ 6.30 ರವರೆಗೆ ಪಂಚನಾಮೆ ಮಾಡಿದ್ದು ಹಾಗೂ ಸದರಿ ಸಮಯದಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ರಕ್ತದ ಕಲೆ ಬಿದ್ದಿದ್ದು ಸದರಿ ರಕ್ತದ ಕಲೆಯನ್ನು ಮತ್ತು ರಕ್ತದ ಕಲೆಯಾಗಿದ್ದ ಒಂದು ಅರ್ಧ ಸೇದಿರುವ ಸಿಗರೇಟ್ ತುಂಡನ್ನು, ರಕ್ತದ ಕಲೆಯನ್ನು ಮಾದರಿಯ ಕಾಟನ್ ನಲ್ಲಿ ಸಂಗ್ರಹಿಸಿ ಒಂದು ಪ್ಲಾಸ್ಟಿಕ್ ಡಬ್ಬದಲ್ಲಿ ಹಾಕಿ ಜಪ್ತಿ ಮಾಡಿದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

ಉತ್ತರಃ -

ಪ್ರಶ್ನೆ **: 20** ಪ್ರಾಸಾ-11 / ವೆಂಕಟೇಗೌಡ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ಅದೇ ದಿನ ಚಾಸಾ. 3 ರಿಂದ 8 ಮತ್ತು 15 ರಿಂದ 17 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದು ನಂತರ ಆರೋಪಿಯಾದ ನಿನ್ನ ಪತ್ತೆ ಬಗ್ಗೆ ಚಾಸಾ.19 ಹಾಗೂ ಅವರ ಸಿಬ್ಬಂದಿಗಳನ್ನು ನೇಮಕ ಮಾಡಿದ್ದು, ದಿನಾಂಕ 25.12.2018 ರಂದು ಮಧ್ಯಾಹ್ನ 3.00 ಗಂಟೆಗೆ ಚಾಸಾ.19 ಹಾಗೂ ಅವರ ಸಿಬ್ಬಂದಿಗಳು ಆರೋಪಿಯಾದ ನಿನ್ನನ್ನು ಪತ್ತೆ ಮಾಡಿ ವರದಿಯೊಂದಿಗೆ ಹಾಗೂ ಆರೋಪಿಯಾದ ನೀನು ಕೃತ್ಯಕ್ಕೆ ಉಪಯೋಗಿಸಿದ ದ್ವಿಚಕ್ರ ವಾಹನ ಸಂಖ್ಯೆ KA-04/JL-0933 ವಾಹನವನ್ನು ಅವರ ಮುಂದೆ ಹಾಜರುಪಡಿಸಿದ ಮೇರೆಗೆ ಆರೋಪಿಯಾದ ನಿನ್ನ ದಸ್ತಗಿರಿ ಕ್ರಮ ಜರುಗಿಸಿ, ವಿಚಾರೆ ಮಾಡಿ ನಿನ್ನ ಸ್ವ-ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿದ್ದು ಹಾಗೂ ಆರೋಪಿಯಾದ ನೀನು ನಿನ್ನ ಸ್ವಇಚ್ಛಾ ಹೇಳಿಕೆಯಲ್ಲಿ ನಿನ್ನ ಜೊತೆ ಬಂದರೆ ನೀನು ಯಶವಂತಪುರದಲ್ಲಿ ರೇಜರ್ ಖರೀದಿಸಿದ ಅಂಗಡಿಯನ್ನು.........................ಡಿಯೋ ಗಾಡಿ ಡಿಕ್ಕಿಯಲ್ಲಿ ಇದ್ದು ಬಟ್ಟೆಯನ್ನು ತೆಗೆದು ಹಾಜರುಪಡಿಸುತ್ತೇನೆ ಎಂದು ಹೇಳಿಕೆ ನೀಡಿದೆ ಎಂದು

ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

ಉತ್ತರಃ -

ಪ್ರಶ್ನೆ : **21** ಫ್ರಾಸಾ-11/ ವೆಂಕಟೇಗೌಡ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ಆರೋಪಿಯಾದ ನಿನ್ನ ಸ್ವ-ಇಚ್ಛಾ ಹೇಳಿಕೆಯ ಆಧಾರದ ಮೇಲೆ ಕೃತ್ಯಕ್ಕೆ ನೀನು ಉಪಯೋಗಿಸಿದ ದ್ವಿಚಕ್ರ ವಾಹನ ಸಂಖ್ಯೆ KA-04/JL-0933 ಮತ್ತು ನೀನು ಧರಿಸಿದ್ದ ಬಟ್ಟೆಯನ್ನು ಅಮಾನತ್ತುಪಡಿಸಿಕೊಳ್ಳಲು ಚಾಸಾ.9 ಮತ್ತು 10 ರವರಿಗೆ ನೊಟೀಸ್ ನೀಡಿ ಠಾಣೆಗೆ ಬರಮಾಡಿಕೊಂಡು ಅವರ ಸಮಕ್ಷಮದಲ್ಲಿ ಆರೋಪಿಯಾದ ನೀನು ಕೃತ್ಯಕ್ಕೆ ಬಳಸಿದ ದ್ವಿಚಕ್ರ ವಾಹನ ತೋರಿಸಿದ ಮೇರೆಗೆ ಮತ್ತು ಕೃತ್ಯದ ಸಮಯದಲ್ಲಿ ನೀನು ಧರಿಸಿದ್ದ ಬಟ್ಟೆ ಎಂದು ಡಿಯೋ ಗಾಡಿ ಡಿಕ್ಕಿಯಿಂದ ತೆಗೆದು ಹಾಜರುಪಡಿಸಿದ ಮೇರೆಗೆ ನೋಡಲಾಗಿ ಆ ಬಟ್ಟೆಗಳು ಬಿಳಿ ಮತ್ತು ಕಪ್ಪು ಬಣ್ಣದ ಟಿ ಶರ್ಟ್, ಕಪ್ಪು ಬಣ್ಣದ ಕಾಟನ್ ಜೀನ್ಸ್ ಪ್ಯಾಂಟ್ ಆಗಿದ್ದು ಆ ಬಟ್ಟೆಗಳು ರಕ್ತಸಿಕ್ತವಾಗಿದ್ದು ಸದರಿ ಬಟ್ಟೆಗಳನ್ನು ಮತ್ತು ದ್ವಿಚಕ್ರ ವಾಹನವನ್ನು ಪಂಚರ ಸಮಕ್ಷಮ ಜಪ್ತಿಪಡಿಸಿದೆ ಮತ್ತು ಚಾಸಾ.9 ಮತ್ತು 10 ರವರ ಹೇಳಿಕೆಗಳನ್ನು ಪಡೆದುಕೊಂಡೆ ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

ಉತ್ತರಃ -

ಪ್ರಶ್ನೆ : **22** ಫ್ರಾಸಾ-11/ ವೆಂಕಟೇಗೌಡ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ಚಾಸಾ.1, 15 ರಿಂದ 17 ರವರನ್ನು ಠಾಣೆಗೆ ಕರೆಸಿ ಅವರು

ಆರೋಪಿಯಾದ ನಿನ್ನನ್ನು ಗುರುತಿಸಿ ಮರು ಹೇಳಿಕೆ ಪಡೆದಿದ್ದು, ಅದೇ ದಿನ ಚಾಸಾ.20 ರಿಂದ 23 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದು ಹಾಗೂ ದಿನಾಂಕ 26.12.2018 ರಂದು ಆರೋಪಿಯಾದ ನೀನು ಕೃತ್ಯ ನಡೆದ ಸ್ಥಳ ಮತ್ತು ಕೃತ್ಯಕ್ಕೆ ಉಪಯೋಗಿಸಿದ ರೇಜರ್ ಅನ್ನು ತೋರಿಸುವುದಾಗಿ ನಿನ್ನ ಸ್ವ-ಇಚ್ಛಾ ಹೇಳಿಕೆ ನೀಡಿದ ಮೇರೆಗೆ ಚಾಸಾ.11 ಮತ್ತು 12 ರವರನ್ನು ನೊಟೀಸ್ ನೀಡಿ ಠಾಣೆಗೆ ಬರಮಾಡಿಕೊಂಡರು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

ಉತ್ತರಃ -

ಪ್ರಶ್ನೆ **: 23** ಫ್ರಾಸಾ-11/ ವೆಂಕಟೇಗೌಡ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ಅವರ ಸಮಕ್ಷಮದಲ್ಲಿ ಆರೋಪಿಯಾದ ನೀನು ಕೃತ್ಯ ಎಸಗಿದ ಸ್ಥಳವನ್ನು ತೋರಿಸಿದ್ದು ಪರಿಶೀಲಿಸಲಾಗಿ ಸದರಿ ಮನೆಯು ವಿನಾಯಕ ಲೇಔಟ್, ಮನೆ ನಂಬರ್ 2/1 ರ ಮುಂದೆ ಇದ್ದು ಸದರಿ ಮನೆಯ ಅಡುಗೆ ಮನೆ, ಹಾಲ್ ಹಾಗೂ ಮನೆಯ ಮುಂದಿನ ಗೇಟ್ ನ ಬಳಿ ರಕ್ತದ ಕಲೆಗಳು ಇದ್ದು ನಂತರ ಆರೋಪಿ ಸ್ವಲ್ಪ ದೂರ ಮುಂದೆ ಕರೆದುಕೊಂಡು ಹೋಗಿ ರಸ್ತೆಯ ಪಕ್ಕದಲ್ಲಿ ಇದ್ದ ಬಿದಿರಿನ ಪೊದೆಯ ಹತ್ತಿರ ಒಂದು ರೇಜರ್ ಅನ್ನು ತೋರಿಸಿದ್ದು ಅದನ್ನು ಪರಿಶೀಲಿಸಲಾಗಿ ಅದರಲ್ಲಿ ರಕ್ತದ ಕಲೆ ಇದ್ದು ಸುಮಾರು 9 1/2 ಇಂಚು ಉದ್ದ ಇದ್ದು, ಅದರ ಮೇಲೆ Balsons Shaver ಎಂದು ಇದ್ದು ಸದರಿ ರೇಜರ್ ಅನ್ನು ಪಂಚರ ಸಮಕ್ಷಮ ಜಪ್ತಿ ಮಾಡಿದ್ದು ಹಾಗೂ ನಂತರ ಚಾಸಾ.11 ಮತ್ತು 12 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

ಉತ್ತರಃ -

ಪ್ರಶ್ನೆ **: 24** ಪ್ರಾಸಾ-11/ ವೆಂಕಟೇಗೌಡ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ಆರೋಪಿಯಾದ ನೀನು ಬಂಡಪ್ಪ ಗಾರ್ಡನ್ ನಲ್ಲಿ ಇರುವ ನಿನ್ನ ಮನೆಯ ನಂ. 136 ರ ಬಳಿ ಕರೆದುಕೊಂಡು ಹೋಗಿ ಚಾಸಾ. 2 ರವರಿಂದ ಕಿತ್ತುಕೊಂಡಿದ್ದ ಚಿನ್ನದ ಚೈನ್ ಅನ್ನು ಹಾಜರುಪಡಿಸುವುದಾಗಿ ಹೇಳಿಕೆ ನೀಡಿದ ಮೇರೆಗೆ ಚಾಸಾ.13 ಮತ್ತು 14 ರವರನ್ನು ನೊಟೀಸ್ ನೀಡಿ ಠಾಣೆಗೆ ಬರಮಾಡಿಕೊಂಡು ಅವರ ಸಮಕ್ಷಮದಲ್ಲಿ ಆರೋಪಿಯಾದ ನೀನು ನಿನ್ನ ಮನೆಯೊಳಗೆ ಕರೆದುಕೊಂಡು ಹೋಗಿ ಬೀರೂವಿನ ಮೇಲೆ ಒಂದು ಪೇಪರ್ ನಲ್ಲಿ ಸುತ್ತಿ ಇಟ್ಟಿದ್ದ ಮಾಂಗಲ್ಯ ಸರದ ತುಂಡನ್ನು ತೆಗೆದು ಹಾಜರುಪಡಿಸಿದ್ದು ಅದನ್ನು ಪಂಚರ ಸಮಕ್ಷಮ ಮಧ್ಯಾಹ್ನ 11.30 ರಿಂದ 12.30 ರ ಸಮಯದಲ್ಲಿ ಪಂಚನಾಮೆ ಮಾಡಿ ಜಪ್ತಿಪಡಿಸಿದ್ದು ಹಾಗೂ ಚಾಸಾ.13 ಮತ್ತು 14 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

ಉತ್ತರಃ -

ಪ್ರಶ್ನೆ **: 25** ಪ್ರಾಸಾ-11/ ವೆಂಕಟೇಗೌಡ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ಅದೇ ದಿನ ಚಾಸಾ.23 ರವರಿಂದ ಗಾಯಾಳುವಿನಿಂದ ಸಂಗ್ರಹಿಸಿ ಕೊಟ್ಟ 3 ಬಟ್ಟೆಗಳನ್ನು ಸೀಲು ಮಾಡಿದ ಕವರ್ ನೊಂದಿಗೆ ತಂದು ಹಾಜರುಪಡಿಸಿ ವರದಿ ನೀಡಿದ ಮೇರೆಗೆ ಸದರಿ ಬಟ್ಟೆಗಳನ್ನು ಮಾಲುಪಟ್ಟಿ ಸಂಖ್ಯೆ 177/2018 ರಲ್ಲಿ ಅಳವಡಿಸಿಕೊಂಡಿದ್ದು ಹಾಗೂ ಅದೇ ದಿನ ಆರೋಪಿಯಾದ ನಿನ್ನನ್ನು ವೈಧ್ಯಕೀಯ ಪರೀಕ್ಷೆ ಮಾಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ದಿನಾಂಕ 28.12.2018 ರಂದು SK ಆಸ್ಪತ್ರೆಗೆ ಭೇಟಿ ನೀಡಿ ಚಾಸಾ. 2 ರವರ ಹೇಳಿಕೆಯನ್ನು ವೈಧ್ಯರ ಸಮಕ್ಷಮ ಪಡೆದುಕೊಂಡಿದ್ದು,

ದಿನಾಂಕ 05.01.2019 ರಂದು SK ಆಸ್ಪತ್ರೆಯ ವೈಧ್ಯರಿಗೆ ಮನವಿ ಸಲ್ಲಿಸಿ ಚಾಸಾ.2 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡೆ ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

ಉತ್ತರಃ -

ಪ್ರಶ್ನೆ **: 26** ಫ್ರಾಸಾ-11/ ವೆಂಕಟೇಗೌಡ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ದಿನಾಂಕ 28.01.2019 ರಂದು ನ್ಯಾಯಾಂಗ ಬಂಧನದಲ್ಲಿ ಇದ್ದ ಆರೋಪಿಯಾದ ನಿನ್ನ ಗುರುತು ಸಂಬಂಧ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿ ಅನುಮತಿ ಪಡೆದುಕೊಂಡಿದ್ದು ದಿನಾಂಕ 07.02.2019 ರಂದು ತಹಶೀಲ್ದಾರ್ ಬೆಂಗಳೂರು ಉತ್ತರ ರವರಿಗೆ ಗುರುತು ಕವಾಯತು ನಡೆಸಲು ಮನವಿ ಸಲ್ಲಿಸಿದ್ದು ನಂತರ ದಿನಾಂಕ 13.02.2019 ರಂದು ತಹಶೀಲ್ದಾರ್ ಬೆಂಗಳೂರು ಉತ್ತರ ರವರು ಗುರುತು ಕವಾಯತನ್ನು ಜೈಲಿನಲ್ಲಿ ನೆರವೇರಿಸಿ ವರದಿಯನ್ನು ನ್ಯಾಯಾಲಯಕ್ಕೆ ನೀಡಿದರು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

ಉತ್ತರಃ -

ಪ್ರಶ್ನೆ **: 27** ಫ್ರಾಸಾ-11/ ವೆಂಕಟೇಗೌಡ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ದಿನಾಂಕ 23.03.2019 ರಂದು ತನಿಖಾ ಕಾಲದಲ್ಲಿ ಅಮಾನತ್ತುಪಡಿಸಿಕೊಂಡಿದ್ದ ವಸ್ತು ಸಂಖ್ಯೆ 1 ರಿಂದ 8 ಅನ್ನು FSL ವರದಿಗಾಗಿ ಮಡಿವಾಳ, FSL ಪ್ರಯೋಗಾಲಯಕ್ಕೆ ಕಳುಹಿಸಿ ಸ್ವೀಕೃತಿ ಪಡೆದಿದ್ದು ನಂತರ ದಿನಾಂಕ 30.03.2019 ರಂದು ತನಿಖೆಯನ್ನು ಪೂರೈಸಿ ಆರೋಪ ಸಾಭೀತಾದ್ದರಿಂದ FSL ವರದಿಯನ್ನು ಬಾಕಿ ಇಟ್ಟು ಆರೋಪಿಯಾದ ನಿನ್ನ

ಮೇಲೆ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

ಉತ್ತರಃ -

ಪ್ರಶ್ನೆ **: 28 -** ನೀವು ಏನಾದರು ಹೇಳುವುದು ಇದೆಯಾ ?

ಉತ್ತರಃ -

ಪ್ರಶ್ನೆ **: 29 -** ನಿಮ್ಮ ಪರ ಯಾರಾದರೂ ಸಾಕ್ಷಿಗಳನ್ನು ವಿಚಾರಣೆ ಮಾಡುವಿರಾ ?

ಉತ್ತರಃ -

(ಆರೋಪಿಯ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಅರ್ಥವಾಗುವಂತೆ ವಿವರಿಸಿ ಓದಿ ಹೇಳಿದಾಗ ಅವರು ನೀಡಿರುವ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿರುತ್ತೇನೆ ಎಂದು ಈ ಮೂಲಕ ಧೃಢೀಕರಿಸುತ್ತಿದ್ದೇನೆ)

**(ಬಿ.ಎಸ್. ರೇಖಾ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಆರೋಪಿಯ ಸಹಿ.